# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ616/2021

## ಚಾಸಾ-8/ಪ್ರಾಸಾ-5

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ06.06.2026**

ಹೆಸರು : ರಾಜಪ್ಪ ತಂದೆ ಹೊನ್ನೂರಪ್ಪ

ವಯಸ್ಸು : **51** ವರ್ಷ

ಉದ್ಯೋಗ : ವ್ಯವಸಾಯ

ವಿಳಾಸ : ದೊಣ್ಣೆಹಳ್ಳಿ ಹೋಸೂರು ಗ್ರಾಮ, ಜಗಳೂರು ತಾಲ್ಲೂಕು

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ-**1** ಗೋತ್ತು ಚಾಸಾ-**6** ಗೋತ್ತಿರುವುದಿಲ್ಲ . ಆರೋಪಿ ಮುಷ್ಟೂರು ಗ್ರಾಮದವರು ಇರುತ್ತಾರೆ . ನನಗೆ ಈ ಪ್ರಕರಣದ ಯಾವುದೇ ಮಹಿತಿ ಇರುವುದಿಲ್ಲ . ನಾನು ಪೋಲಿಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ .

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು).

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿಃ **19.04.2021** ಸುಮಾರು ಸಂಜೆ **7.00** ಸಮಯಕ್ಕೆ ನಾನು ಮುಷ್ಟೂರು ಗ್ರಾಮದ ನಮ್ಮ ಮನೆ ಬಳಿ ನಿಂತಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅ ಸಮಯುಕ್ಕೆ ಆರೋಪಿಯು ಮುಷ್ಟೂರು ಕಡೆಗೆ ತನ್ನ **KA-17 -P-2435** ವಾಹವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಚಾಸಾ-**1** ಮತ್ತು **6** ರವರಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ-**7** ರವರು ಚಾಸಾ-**1**

ಮತ್ತು **6** ರವರಿಗೆ ಉಪಚರಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತ ಸಂಬಂದವಾಗಿ ಬೆನ್ನಿಗೆ ತೋಡೆಗೆ ಕೈ ಕಾಲಿಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದು ರಕ್ತ ಗಾಯ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ಆರೋಪಿ ಹೆಸರು ಪ್ರದೀಪ್ ಕುಮಾರ್ ಎಂದುತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ಚಾಸಾ-1 ಮತ್ತು 6 ರವರನ್ನು ಜಗಳೂರು ಪೋಲೀಸ್ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿಃ 20.04.2021 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ತಾನು ಪೊಲೀಸರಿಗೆ ಹೇಳಿಕೆಯನ್ನು ಓದಿ ತಿಳಿಸಿದ್ದು **,** ಸಾಕ್ಷಿ ನಿರಾಕರಿಸಿಸುತ್ತಾರೆ **.** ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ **8** ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯ ಇರುವ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ-ಆರೋಪಿ ಪರ ವಕೀಲರಿಂದಃ</u>**

ಏನು ಇರುವುದಿಲ್ಲ **.**

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ**.)**

**ಓ ಹೇ ಕೇ ಸರಿ ಇದೆ**

**ಸಹಿ/-**

**ಪ್ರ.ದ.ನ್ಯಾ.ದಂ., ಜಗಳೂರು**